ಇರುವುದಾಗಿಯೂ, ಅದನ್ನು ನನ್ನ ಸುಪರ್ದಿಗೆ ವಹಿಸುವುದಾಗಿಯೂ ವಿಶ್ವನಾಥ ವೇಮುಲಶಾಸ್ತ್ರಿ ಹೇಳಿದ್ದ. ನರಸಿಂಹರೆಡ್ಡಿಯವರ ವಿಚಿತ್ರ ಮ್ಯಾನರಿಸಂಗಳ ಬಗ್ಗೆ ಯೋಚಿಸುತ್ತಾ ನಿದ್ದೆಗೆ ಜಾರಿದ್ದೆ. ಕನಸೊಂದು ಬಿದ್ದು ಥಟ್ಟನೆ ಎಚ್ಚರವಾದಾಗ ಬೆಳಗಿನ ಜಾವ ನಾಲ್ಕು ಗಂಟೆಯಾಗಿತ್ತು. ಕನಸನ್ನು ನೆನೆದು ವಿಪರೀತ ಭಯವಾಗಿತ್ತಲ್ಲದೆ ಶರೀರ ಬೆವರತೊಡಗಿತ್ತು. ಎಸಿ ರಿಮೋಟ್‌ನಿಂದ ಥಂಡಿಯನ್ನು ಜಾಸ್ತಿ ಮಾಡಿದ್ದೆ. ಕನಸು ಹೀಗಿತ್ತು: ಯಾವುದೋ ಮಧುರವಾದ ಧ್ವನಿಯೊಂದರ ಹಿಂದೆ ಬಿದ್ದು ಹೋದವನಿಗೆ ದೊಡ್ಡ ಕೋಟೆಯಂಥ ಬಂಗಲೆಯೊಂದರ ಬಾಗಿಲು ತೆರೆದುಕೊಂಡಿತ್ತು. ಪುಸ್ತಕದಲ್ಲಿ ಓದಿದ, ಸಿನಿಮಾದಲ್ಲಿ ನೋಡಿದ ಸ್ವರ್ಗದಂತೆ ಕಂಗೊಳಿಸುತ್ತಿತ್ತು. ಅಪೂರ್ವ ಸುಂದರಿಯರು ಅಮೃತ ಕಳಸಗಳೊಂದಿಗೆ ಸ್ವಾಗತಿಸಿದ್ದರು. ಮಂಗಳ ವಾದ್ಯಗಳನ್ನು ಯುವತಿಯರೇ ನುಡಿಸುತ್ತಿದ್ದರು. ಝಗಮಗಿಸುವ ದೊಡ್ಡ ಹಾಲ್‌ನಲ್ಲಿ ಟೇಬಲ್‌ಗಳನ್ನು ಜೋಡಿಸಲಾಗಿದೆ. ಪ್ರತಿ ಟೇಬಲ್‌ನಲ್ಲೂ ನಾಲ್ಕು ಜನರಂತೆ ಅಪರಿಚಿತರು ಕುಳಿತಿದ್ದಾರೆ. ನನಗಾಗಿ ಒಂದು ಪ್ರತ್ಯೇಕವಾದ ಆಸನ ಹಾಕಲಾಗಿದೆ. ನನ್ನನ್ನು ಕಂಡೊಡನೆ ಪ್ರತಿಯೊಬ್ಬರೂ ಎದ್ದು ನಮಸ್ಕರಿಸುತ್ತಾರೆ. ನಾನು ಕುಳಿತ ಮೇಲೆಯೇ ಎಲ್ಲರೂ ತಮ್ಮ ಆಸನಗಳನ್ನು ಅಲಂಕರಿಸುತ್ತಾರೆ. ಎಲ್ಲರಿಗೂ ಅಮೃತವನ್ನು ಪೂರೈಸಲಾಗುವುದೆಂದು ಅಶರೀರವಾಣಿಯೊಂದು ಉಲಿಯುತ್ತದೆ. ಸಣ್ಣದಾಗಿ ಗದ್ದಲ. ಪ್ರತಿಯೊಬ್ಬರ ಮುಂದೆಯೂ ಒಂದೊಂದು ಹೊಳೆಯುವ ಬಂಗಾರದ ಮೊಗ್ ಇಡಲಾಗಿದೆ. ಪ್ರತಿಯೊಂದು ಟೇಬಲ್ ಬಳಿಯೂ ದೇವಕನ್ಯೆಯರಂಥ ಸುಂದರಿಯರು ತಲಾ ಒಬ್ಬೊಬ್ಬರಾಗಿ ನಿಲ್ಲುತ್ತಾರೆ. ಹಾಗೆಯೇ ನನ್ನ ಮುಂದೆಯೂ ಕಿನ್ನರಿಯೊಬ್ಬಳು ನಿಂತಿದ್ದಾಳೆ. ಎಲ್ಲರ ಎದೆಗಳಲ್ಲೂ ವಜ್ರಲೇಪಿತ ಬಂಗಾರದ ನಲ್ಲಿಗಳನ್ನು ಜೋಡಿಸಲಾಗಿದೆ. ಹಾಲ್‌ನಲ್ಲಿ ಕುಳಿತಿದ್ದ ಪ್ರತಿಯೊಬ್ಬರೂ ನಲ್ಲಿಗಳಿಂದ ಅಮೃತವನ್ನು ಬಂಗಾರದ ಮೊಗ್‌ಗಳಿಗೆ ತುಂಬಿಸಿಕೊಂಡು ಗಟ ಗಟ ಕುಡಿಯುತ್ತಿದ್ದಾರೆ. ನಾನು ಕೂಡ ಬಂಗಾರದ ಮೊಗ್ ಅನ್ನು ಕಿನ್ನರಿಯ ಎದೆಗೆ ಹಿಡಿಯುತ್ತೇನೆ. ಕೆಂಪು ದ್ರವ ಮೊಗ್ ಅನ್ನು ತುಂಬುತ್ತದೆ. ಅರೆ, ರಕ್ತ! ವಿಸ್ಮಯ ಮತ್ತು ಗಾಬರಿ ಎರಡೂ ಹುಟ್ಟಿಕೊಂಡಿದ್ದವು.

"ಅಮೃತಾನ ಯಾವೊತ್ತಾದರೂ ಕುಡಿದಿದ್ದೀಯಾ..." ಕಿನ್ನರಿ ಕಿಲ ಕಿಲ ನಕ್ಕು ಕೇಳಿದ್ದಳು.

"ಇಲ್ಲ, ಆದರೆ ಅಮೃತಕ್ಕೆ ಕೆಂಪು ಬಣ್ಣ ಇರುತ್ತದೆಂದು ನನಗೆ ಗೊತ್ತಿರಲಿಲ್ಲ..." ನುಡಿದಿದ್ದೆ ನಾನು. ಕೆಂಪು ದ್ರವದಲ್ಲಿ ಬೆರಳಿಟ್ಟಿದ್ದೆ. ಅದು ನಿಜವಾಗಿಯೂ ರಕ್ತವೆ ಆಗಿತ್ತು."ಇದು ಅಮೃತವಲ್ಲ ರಕ್ತ..." ನಾನು ಕಿರುಚಿದ್ದೆ.

"ಹೌದು ರಕ್ತವೇ. ರಕ್ತ ಅಮೃತಕ್ಕಿಂತಲೂ ಮಿಗಿಲಾದದ್ದು. ರಕ್ತವಿಲ್ಲದೆ ಯಾವ ಜೀವಿಯೂ ಬದುಕಲಾರದು..." ಎಂದು ಹೇಳುತ್ತಿದ್ದ ಕಿನ್ನರಿಯ ಬಾಯಲ್ಲಿ ಕೋರೆ ಹಲ್ಲುಗಳು ಮೂಡುತ್ತಿದ್ದವು. ನಾನು ಅಲ್ಲಿಂದ ಎದ್ದು ಹೊರಡಲನುವಾದೆ. ಎಲ್ಲಾ ಟೇಬಲ್‌ಗಳ ಹತ್ತಿರ ನಿಂತಿದ್ದ ಸುಂದರಿಯರೆಲ್ಲರೂ ಈಗ ನನ್ನ ಕಡೆ ಬರತೊಡಗಿದ್ದರು. ಮತ್ತು ಅವರೆಲ್ಲರ ಬಾಯಿಗಳಲ್ಲೂ ಕೋರೆಹಲ್ಲುಗಳು ಮೂಡಿದ್ದವು. ನಾನು ಮತ್ತಷ್ಟು ಹೆದರಿ ಬಾಗಿಲ ಮೂಲಕ ಹೊರಗೆ ಹೋಗಲು ಓಡತೊಡಗಿದೆ. ನಾನು ಓಡಿದಂತೆ ಬಾಗಿಲೂ ದೂರ ದೂರ ಓಡಿದಂತೆ. ಈಗ ಎಲ್ಲಾ ಸುಂದರಿಯರೂ ನನ್ನ ಮೇಲೆ ಎರಗಿದ್ದರು. ಹಾಲ್‌ನಲ್ಲಿ ಕುಳಿತು ಅಮೃತ ಕುಡಿಯುತ್ತಿದ್ದವರೆಲ್ಲಾ ಗಹಗಹಿಸಿ ನಗುತ್ತಿದ್ದಾರೆ. ಕಿಟಾರನೆ ಕಿರುಚುತ್ತಾ ನಡುಗುತ್ತಾ ನೆಲಕ್ಕುರುಳಿದ್ದೆ. ಕನಸು ಕಳಚಿಕೊಂಡಿತ್ತು. ನರಸಿಂಹರೆಡ್ಡಿ ತಮ್ಮ ಪೂರ್ವಿಕರಲ್ಲೊಬ್ಬರಾದ ಪಚ್ಚಿ ನೆತ್ತರು ರಾಮರೆಡ್ಡಿ, ರಕ್ತ ಕುಡಿಯುತ್ತಿದ್ದ ಅಣ್ಣನ ಮಗ ಪ್ರತಾಪರೆಡ್ಡಿಯ ಬಗ್ಗೆ ಹೇಳಿದ್ದರಿಂದ ಇಂಥ ಕನಸು ಬಿದ್ದಿರಬಹುದೆಂದು ಸಮಾಧಾನ ಪಟ್ಟುಕೊಂಡು ನೀರು ಕುಡಿದು ಮತ್ತೆ ಮಲಗಿದ್ದೆ.